ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ ದಿನಾಂಕ : DATE : 04/07/201

# ಗೌರ್ನರ್‌ಗೆ ರಾಜೀನಾಮೆ: ಸ್ಪೀಕರ್ ಗರಂ

## ಆನಂದ್ ಸಿಂಗ್ ರಾಷ್ಟ್ರಪತಿಗೂ ರಾಜೀನಾಮೆ ಸಲ್ಲಿಸಲಿ: ರಮೇಶ್‌ಕುಮಾರ್

ಬೆಂಗಳೂರು: 'ಶಾಸಕರಾದವರಿಗೆ ರಾಜೀನಾಮೆಯನ್ನು ಯಾರಿಗೆ, ಹೇಗೆ ನೀಡಬೇಕೆಂಬ ಕನಿಷ್ಠ ಅರಿವು ಇರುಬೇಕು. ಇಲ್ಲದಿದ್ದರೆ ಅವರ ಹಣೆಬರಹ.'

ರಾಜ್ಯಪಾಲರಿಗೂ ತಮ್ಮ ರಾಜೀನಾಮೆ ಪ್ರತಿ ಸಲ್ಲಿಸಿರುವ ಶಾಸಕ ಆನಂದ್ ಸಿಂಗ್ ವಿರುದ್ಧ ವಿಧಾನಸಭಾಧ್ಯಕ್ಷ ರಮೇಶ್ ಕುಮಾರ್ ಕೆಂಡಾಮಂಡಲರಾದ ರೀತಿ ಇದು. ವಿಧಾನಸೌಧದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಭಾಧ್ಯಕ್ಷರನ್ನು ಬಿಟ್ಟು ಬೇರೆ ಯಾರಿಗಾದರೂ ಶಾಸಕರು ರಾಜೀನಾಮೆ ಪತ್ರ ಕೊಟ್ಟರೆ ಅದು ನನಗೆ ಸಂಬಂಧವಿಲ್ಲದ ವಿಷಯ. ಶಾಸಕರಾದವರಿಗೆ ರಾಜೀನಾಮೆ ಯಾರಿಗೆ, ಹೇಗೆ ಕೊಡಬೇಕೆಂಬ ಕನಿಷ್ಠ ಅರಿವು ಇರಬೇಕು. ಇಲ್ಲದಿದ್ದರೆ ಅವರ ಹಣೆಬರಹ. ನನಗೆ ಪರಮಾಧಿಕಾರವೇನೂ ಇಲ್ಲ, ಜವಾಬ್ದಾರಿಯಷ್ಟೇ ಇದೆ. ಆನಂದ್ ಸಿಂಗ್ ರಾಜ್ಯಪಾಲರಿಗೂ ರಾಜೀನಾಮೆ ಪ್ರತಿ ಸಲ್ಲಿಸಿದ್ದಾರೆಂದರೆ ಅವರ ಉದ್ದೇಶ ಬೇರೆ ಇರಬೇಕು. ಸಮಯ ಇದ್ದರೆ ಅವರು ರಾಷ್ಟ್ರಪತಿ ಅವರನ್ನೂ ಭೇಟಿಯಾಗಿ ರಾಜೀನಾಮೆ ಸಲ್ಲಿಸಲಿ ಎಂದು ವ್ಯಂಗ್ಯವಾಡಿದರು. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಂದ ಆಯ್ಕೆಯಾದ ಶಾಸಕರ ವರ್ತನೆ ಇಷ್ಟವಾಗದಿದ್ದರೆ ಅವರನ್ನು ವಾಪಸ್ ಕರೆಸಿಕೊಳ್ಳುವ ಅವಕಾಶ ಜನಪ್ರತಿನಿಧಿಗಳ ಕಾಯ್ದೆಯಲ್ಲಿ ಇಲ್ಲ. ಆದರೆ, ಶಾಸಕರು ರಾಜೀನಾಮೆ ಸಲ್ಲಿಸಿದ ಸಂದರ್ಭದಲ್ಲಿ ಅಂತಹ ವರ್ತನೆ ಇಷ್ಟವಾಗದಿದ್ದರೆ ಯಾವುದೇ ಪ್ರಜೆ ಆಕ್ಷೇಪ ಸಲ್ಲಿಸಲು ಅವಕಾಶವಿದೆ. ರಾಜೀನಾಮೆ ನೀಡಿರುವ ಆನಂದ್ ಸಿಂಗ್ ವಿರುದ್ಧ ಇದುವರೆಗೂ ಯಾರಿಂದಲೂ ಆಕ್ಷೇಪ ಬಂದಿಲ್ಲ. ಯಾರು ಬೇಕಾದರೂ ಅವರ ವಿರುದ್ಧ ದೂರು ನೀಡಬಹುದು ಎಂದು ಹೇಳಿದರು.

### ಇಬ್ಬರಲ್ಲ, ಒಬ್ಬರೇ ರಾಜೀನಾಮೆ ಕೊಟ್ಟಿರೋದು, ಪರಿಶೀಲಿಸುವೆ



ಶಾಸಕರಾದ ಆನಂದ್‌ಸಿಂಗ್ ಮತ್ತು ರಮೇಶ್ ಜಾರಕಿಹೊಳಿ ಇಬ್ಬರೂ ರಾಜೀನಾಮೆ ಸಲ್ಲಿಸಿದ್ದಾರಾ ಎಂಬ ಸುದ್ದಿಗಾರರ ಪ್ರಶ್ನೆಗೆ, ಇಬ್ಬರು ಶಾಸಕರು ರಾಜೀನಾಮೆ ಕೊಟ್ಟಿದ್ದಾರೆ ಎಂದು ಯಾರು ಹೇಳಿದ್ದಾರೆ. ಅಧಿಕೃತವಾಗಿ ಒಬ್ಬ ಶಾಸಕರು ಮಾತ್ರ ರಾಜೀನಾಮೆ ಸಲ್ಲಿಸಿದ್ದಾರೆ. ಆನಂದ್ ಸಿಂಗ್ ಅವರ ರಾಜೀನಾಮೆ ಪತ್ರ ನಮ್ಮ ಕಚೇರಿಯಲ್ಲಿ ಸ್ವೀಕೃತವಾಗಿದ್ದು, ಅದನ್ನು ಪರಿಶೀಲಿಸುತ್ತೇನೆ. ರಮೇಶ್ ಜಾರಕಿಹೊಳಿ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರುವ ವಿಚಾರ ಗೊತ್ತಿಲ್ಲ. ಅವರ ರಾಜೀನಾಮೆ ಪತ್ರವೂ ನಮ್ಮ ಕಚೇರಿಗೆ ತಲುಪಿಲ್ಲ. ಇಂತಹ ವಿಷಯದಲ್ಲಿ ಸಭಾಧ್ಯಕ್ಷರು ಉತ್ತರ ಕೊಡಲು ಸಾಧ್ಯವಿಲ್ಲ. ಒಂದು ರಾಜೀನಾಮೆ ಪತ್ರ ಬಹಿರಂಗಪಡಿಸಿ ಇನ್ನೊಂದನ್ನು ಬಚ್ಚಿಡಲು ಸಾಧ್ಯವೇ? ಎಂದು ಪ್ರಶ್ನಿಸಿದರು.

### ರಮೇಶ್ ರಾಜೀನಾಮೆ 8ನೇ ಅದ್ಭುತ: ಸತೀಶ್

ಬೆಂಗಳೂರು: ರಮೇಶ್ ಜಾರಕಿಹೊಳಿ ಏಕೆ ರಾಜೀನಾಮೆಗೆ ಮುಂದಾಗಿದ್ದಾರೆ ಎಂಬುದು ಈಗಲೂ ನನಗೆ ಎಂಟನೇ ಅದ್ಭುತದಂತಿದೆ. ಅವರ ರಾಜೀನಾಮೆ ನಿರ್ಧಾರದ ಹಿಂದೆ ಅವರ ಮೂವರು ಅಳಿಯಂದಿರ ಕೈವಾಡ ಇರುವುದು ಸ್ಪಷ್ಟ. ಅವರ ರಾಜೀನಾಮೆ ಅಂಗೀಕಾರವಾದರೆ ಲಖನ್ ಜಾರಕಿಹೊಳಿ ಅವರನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಸುವ ಇಚ್ಛೆ ಇದೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ. ಬೆಂಗಳೂರಿನಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಮೇಶ್ ಜಾರಕಿಹೊಳಿ ಅವರ ಸಮಸ್ಯೆ ಏನು? ಅವರ ಬೇಡಿಕೆಗಳು ಏನು? ರಾಜೀನಾಮೆ ನಿರ್ಧಾರ ಮಾಡಿರುವುದು ಏಕೆ ಎಂಬ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಕಳೆದ ಆರು ತಿಂಗಳಿಂದ ಅವರಿಗೂ ನಮಗೂ ಸಂಪರ್ಕವೇ ಇಲ್ಲ. ಹೀಗಾಗಿ ಮಾಧ್ಯಮದವರೇ ರಮೇಶ್ ಜಾರಕಿಹೊಳಿ ಅವರ ಸಮಸ್ಯೆ ಏನು ಎಂದು ಕೇಳಬೇಕು. ಪ್ರಸ್ತುತ ನಮ್ಮ ರಾಜಕೀಯ ಹಾಗೂ ವ್ಯವಹಾರ ಎರಡೂ ಬೇರೆ ಬೇರೆ ಎಂದು ಸ್ಪಷ್ಟಪಡಿಸಿದರು.

4